ಅ) ಇದುವರೆಗೆ ಅಧಿಕೃತವಾಗಿ ಕಚೇರಿ ಪ್ರಾರಂಭಿಸದಿರಲು ಕಾರಣಗಳೇನು 2-3 ಬಾರಿ ಪ್ರಾರಂಭೋತ್ಸವ ಸಿದ್ದತೆ-ನಡೆಸಿ ಮಧ್ಯದಲ್ಲೇ ನಿಂತುಹೋದ ಸಂಗತಿ ಸರ್ಕಾರಕ್ಕೆ ತಿಳಿದಿದೆಯೇ?

ಇ) ಸಾರ್ವಜನಿಕ ಹಿತದೃಷ್ಟಿಯಿಂದ ಉದ್ಘಾಟ ಮಾಡುವುದು ಯಾವಾಗ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಹೌದು.

ಆ) ಹೌದು.

ಇ) ಔರಾದ್ ಪಟ್ಟಣದಲ್ಲಿ ಅಗ್ನಿಶಾಮಕ ಠಾಣೆಯನ್ನು ಶೀಘ್ರವಾಗಿ ತೆರೆಯಲು ಕ್ರಮತೆಗೆದುಕೊಳ್ಳಲಾಗುವುದು.

ಪೌರಾಡಳಿತ ಇಲಾಖೆಯಲ್ಲಿ ಅಧಿಕಾರಗಳ ಅವ್ಯವಹಾರ

1024 (1362) - ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೌರಾಡಳಿತ ಇಲಾಖೆಯಲ್ಲಿ ಎಷ್ಟು ಮಂದಿ ಕಾರ್ಯ ನಿರ್ವಾಹಕ ಅಧಿಕಾರಿಗಳು ಲೋಕಾಯುಕ್ತ ಬಲೆಗೆ ಸಿಕ್ಕಿದ್ದಾರೆ; ಎಷ್ಟು ಮಂದಿ ವಿರುದ್ಧ ಪ್ರಕರಣ ಹೊರಡಿಸಲಾಗಿದೆ;

ಆ) ಎಷ್ಟು ಮಂದಿ ನಿಲಂಬನೆಯಲ್ಲಿದ್ದಾರೆ;

ಇ) ತಿಳಿದ ವರಮಾನಕ್ಕಿಂತ ಹೆಚ್ಚಿನ ಆಸ್ತಿ ಪಾಸ್ತಿ ಹೊಂದಿರುವ ಎಷ್ಟು ಪ್ರಕಣಗಳು ಸರ್ಕಾರದ ಗಮನಕ್ಕೆ ಬಂದಿದೆ;

ಈ) ಎಷ್ಟು ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸಲಾಗಿದೆ ಹಾಗೂ ಆರೋಪಿಗಳಿಗೆ ಶಿಕ್ಷೆ ವಿಧಿಸಲಾಗಿದೆ?

ಶ್ರೀ ಕುಮಾರ್ ಬಂಗಾರಪ್ಪ ಎಸ್. (ಪೌರಾಡಳಿತ ರಾಜ್ಯ ಸಚಿವರು) :

ಅ) 17

ಆ) ಪ್ರಸ್ತುತ ನಿಲಂಬನೆಯಲ್ಲಿ ಯಾರೂ ಇರುವುದಿಲ್ಲ.

ಇ) ಯಾವುದೂ ಇರುವುದಿಲ್ಲ.

ಈ) ಎಲ್ಲಾ ಪ್ರಕರಣಗಳನ್ನು ವಿಚಾರಣೆಗೆ ಒಳಪಡಿಸಿದೆ 2 ಪ್ರಕರಣಗಳಲ್ಲಿ ನ್ಯಾಯಾಲಯದಿಂದ ಖುಲಾಸೆ ಆಗಿದೆ. ಇತರೆ ಪ್ರಕರಣಗಳು ಇತ್ಯರ್ಥಗೊಂಡಿರುವುದಿಲ್ಲ.

ಬೆಂಗಳೂರು ಪ್ರಾದೇಶಿಕ ಸಾರಿಗೆ ಕಛೇರಿಗಳು

1025 (1364) - ಶ್ರೀ ಗುರುಸ್ವಾಮಿ ಎ.ಎಸ್. ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಎಷ್ಟು ಪ್ರಾದೇಶಿಕ ಸಾರಿಗೆ ಕಛೇರಿಗಳಿವೆ?

ಆ) ಇವುಗಳಲ್ಲಿ ಯಾವ ಯಾವ ಕಛೇರಿಗಳ ಮೇಲೆ ದೂರು ಬಂದಿದೆ ಯಾವ ಸಿಬ್ಬಂದಿಯ ಮೇಲೆ ತಿಳಿದ ಪ್ರಮಾಣಕ್ಕಿಂತ ಹೆಚ್ಚಿನ ಆಸ್ತಿಗಳಿಸಿರುವ ದೂರು ಬಂದಿದೆ?

ಇ) ಎಷ್ಟು ಪ್ರಕರಣಗಳಲ್ಲಿ ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗಿದೆ; ಎಷ್ಟು ಪ್ರಕರಣಗಳನ್ನು ನೋಂದಾಯಿಸಿಕೊಳ್ಳಲಾಗಿದೆ?